ಹೀಗೆ ಘಟನೆಗಳು ನಡೆಯುತ್ತಿದ್ದಾಗ, ಕಥೆಗೊಂದು ತಿರುವು ಪ್ರಾಪ್ತವಾಯಿತು – ಒಂದು ದಿನ ಆ ಫೇಂಡಾಮೃಗ ಕಾಣದಾಯಿತು. ಸ್ನಾನ ಮಾಡಿ ಬಟ್ಟೆಗಳಿಗಾಗಿ ಅಲ್ಮೆರಾವನ್ನು ತೆರೆದು ನೋಡಿದಾಗ ಫೇಂಡಾಮೃಗ ಕಳವಾಗಿರುವುದನ್ನು ಕಂಡು ಅತ್ತಿಗೆ ಗಾಬರಿಯಾದಳು. ತನ್ನ ತೊಯ್ದ ದೇಹ ಮತ್ತಷ್ಟು ಒದ್ದೆಯಾಗುವಂತೆ ಅವಳು ಅತ್ತಳು. ನನ್ನ ಅಮ್ಮನ ಬಳಿ ಹೇಳಿಕೊಂಡಳು. ತನ್ನ ಗಂಡನ ಮೇಲೆ ಕೋಪಿಸಿಕೊಂಡಳು. ನನ್ನಿಂದ ಈ ಮನೆಯಲ್ಲಿ ಒಂದು ಕ್ಷಣವೂ ಇರಲಾಗದು ಎಂದು ಆವೇಶಪಟ್ಟಳು. ತನಗಿದ್ದ ಗೌರವ ಕಳೆದುಹೋದದ್ದಾಗಿಯೂ ಸಹ ಅವಳಿಗೆ ಅನಿಸಿರಬಹುದು.

ನಿಮಗೆ ಖಂಡಿತ ಗೊತ್ತು, ನಾನು ಅದನ್ನು ಕದಿಯಲಿಲ್ಲವೆಂದು. ಚಿನ್ನದ ಮೊಟ್ಟೆಯಿಡುವ ಕೋಳಿಯನ್ನು ಕುಯ್ಯುವ ಮುಟ್ಠಾಳನೇ ನಾನು? ಮತ್ತೆ ಯಾರು ಕದ್ದಿರಬಹುದು?

ದುಡ್ಡು ಮಾತ್ರ ಕಾಣದಿದ್ದರೆ ಇಷ್ಟೊಂದು ಆರ್ಭಟವಾಗುತ್ತಿತ್ತೇ ಎನ್ನುವುದು ಸಂಶಯವೇ. ಫೇಂಡಾಮೃಗವಲ್ಲವೇ ಕಾಣದಾಗಿರುವುದು. ಕೋಳಿ ಮೊಟ್ಟೆ ಮಂತ್ರ ಮಾಡಿಸುವುದಾಗಿ ಅಮ್ಮ ಹೆದರಿಸುತ್ತಿದ್ದಳು. ನಮ್ಮ ಮನೆಯನ್ನು ಮಾತ್ರವಲ್ಲ, ನಮ್ಮ ಬೀದಿಯನ್ನೇ ರಂಪಕ್ಕೆ ಒಳಗಾಗಿಸಿತ್ತು ಈ ಘಟನೆ. ಒಳಗೊಳಗೆ ನಾನು ಯಾಕೋ ಚಡಪಡಿಸುತ್ತಿದ್ದೆ; ಅದು ಕಾಣೆಯಾಗಿರುವುದರಲ್ಲಿ ನಾನು ಭಾಗಿ ಎಂಬಂತೆ.

ಮಾರನೆಯ ದಿನ ಅತ್ತಿಗೆ ಅಲ್ಮೆರಾವನ್ನು ತೆರೆದಾಗ ಫೇಂಡಾಮೃಗ ಅದೇ ಜಾಗದಲ್ಲಿ ಭದ್ರವಾಗಿದ್ದದ್ದನ್ನು ನೋಡಿದಳು. ದುಡ್ಡು ಏನೂ ಕಳೆದುಹೋಗಿಲ್ಲ ಎಂಬುದನ್ನು ಖಚಿತಪಡಿಸಿಕೊಂಡಳು. ಕೋಳಿ ಮೊಟ್ಟೆಯ ಮಂತ್ರಕ್ಕೆ ಹೆದರಿ ಯಾರೋ ಹಿಂತಿರುಗಿಸಿ ಇಟ್ಟಿರಬಹುದು ಎನ್ನುವ ಅಮ್ಮನ ಊಹೆಯನ್ನು ಯಾರಿಂದಲೂ ಅಲ್ಲಗಳೆಯಲಾಗಲಿಲ್ಲ. ನಂಬಲಾಗದ ವಿಷಯವೆಂದರೆ ಈ ನಡುವೆ 24 ಗಂಟೆಯಲ್ಲಿ ನಮ್ಮ ಮನೆಗೆ ಹೊರಗಿನಿಂದ ಯಾರೂ ಬಂದುಹೋಗಿರದಿದ್ದುದು ಎಂಬುದೇ. ಮತ್ತೆ ಹೇಗೆ ಇದು ನಡೆದಿರಲು ಸಾಧ್ಯ? ಮನೆಯಲ್ಲಿರುವವರೇ ಮಾಡಿರಬೇಕೆಂಬ ಸಂಶಯ ಹುಟ್ಟುತ್ತದೆ ಅಲ್ಲವೇ? ಹಾಗಾದರೆ ನಮ್ಮಲ್ಲಿ ಯಾರು ಕಳ್ಳ? ಅಣ್ಣ, ಅಮ್ಮ, ನನ್ನ ತಂಗಿ?

ಫೇಂಡಾಮೃಗದ ಮೇಲೆ ನನ್ನ ತಂಗಿಗೆ ದ್ವೇಷವಿದ್ದರೂ ಅದನ್ನು ಕದಿಯುವಷ್ಟು ಅವಳು ಕೆಟ್ಟವಳಲ್ಲ. ಆ ತಾಕತ್ತು ಸಹ ಅವಳಲ್ಲಿಲ್ಲ ಎನ್ನುವುದು ನನಗೆ ಗೊತ್ತು.

ಅತ್ತಿಗೆ ಈ ರೀತಿಯಾದ ಒಂದು ಸುಳ್ಳನ್ನು ಹಬ್ಬಿಸಿರುವಳು ಎನ್ನುವ ಕೆಲವರ ಬೆನ್ನಹಿಂದಿನ ಆಪಾದನೆಯನ್ನು ಸುಳ್ಳುಮಾಡುವಂತೆ ಎರಡು ದಿನ ಕಳೆದು ಮತ್ತೆ ಅದು ಕಳೆದುಹೋಗಿ ಮಾರನೆಯ ದಿನ ಮೊದಲಿನಂತೆಯೇ ಮತ್ತೆ ಬಂದಿತ್ತು. ಈ ಸಲ ಯಾರು ಗಾಬರಿಯಾಗಲಿಲ್ಲ. ಆದರೆ ಭಯವಿತ್ತು, ಎಲ್ಲಿ ಮತ್ತೆ ಬಾರದೇ ಹೋಗುವುದೋ ಎಂದು. ದುಡ್ಡು ಸುರಕ್ಷಿತವಾಗಿದ್ದದ್ದರಿಂದ ನಾವು ಮತ್ತೆ ಗೊಂದಲಕ್ಕೊಳಗಾದೆವು. ಅಮಾನುಷವಾದ ಏನೋ ಒಂದು ನಡೆಯುವಂತೆ ಅನುಮಾನ ಉಂಟಾಯಿತು.

ಮತ್ತೆ ಕಳವಾಗಲಾರದೆಂದು ಯಾವ ಭರವಸೆ?

ಅದರಲ್ಲಿರುವ ನಾಣ್ಯಗಳನ್ನು ಖಾಲಿಮಾಡಿ ಆ ಫೇಂಡಾಮೃಗವನ್ನು ದೇವರ ಪಟಗಳಿರುವ ಸ್ಟ್ಯಾಂಡಿನಲ್ಲಿಡುವಂತೆ ಅಮ್ಮ ಅತ್ತಿಗೆಗೆ ಸಲಹೆ ನೀಡಿದಳು. ಆಕೆಯೂ ಬೇರೆ ದಾರಿ ತೋಚದೆ ಇದಕ್ಕೆ ಒಪ್ಪಿಕೊಂಡಳು. ಫೇಂಡಾಮೃಗ ಈಗ ಖಾಲಿ ಹೊಟ್ಟೆಯಲ್ಲಿ ದೇವರ ರಕ್ಷಣೆಗೆ ಒಳಪಟ್ಟಿತು.

ನಿರಾಶೆಯ ಭಾವನೆ ನನ್ನನ್ನು ಆವರಿಸಿಕೊಂಡಿತು. ಅದನ್ನು ನಿರಂತರವಾಗಿ ಕಳೆದುಕೊಂಡಂತೆ